ವರದಿ ಕಳುಹಿಸುತ್ತಾರೋ ಅಲ್ಲಿಗೆ ರೆಮಿಷ್ಕೊಡುತ್ತೇವೆ.

ಶ್ರೀ ಎಚ್. ಕೆ. ಶಿವರುದ್ರಪ್ಪ.—ಹಾಗಾದರೆ ಗುಂಡ್ಲು ಪೇಟೆ ತಾಲ್ಲೂಕಿನಲ್ಲಿ ಸರಿಯಾಗಿ ಮಳೆ ಬೆಳೆಯಾಗಿದೆಯೇ ?

Sri Kadidal MANJAPPA.—That is coming to the distress question Sir. If the Hon'ble member wants, I can furnish it later on.

ಶ್ರೀ ಎಚ್. ಕೆ. ಶಿವರುದ್ರಪ್ಪ.—ಇದನ್ನು ತನಿಖೆ ಮಾಡಿ ಹೇಳಿದವರು ಯಾರು ? ಅಲ್ಲಿ ಎಷ್ಟಾಣೆ ಬೆಳೆಯಾಗಿದೆ ?

ಶ್ರೀ ಕಡಿದಾಳ್ ಮಂಜಪ್ಪ.—ರೆಮಿಷ್ಕ ಸ್ಟೇಟ್‌ಮೆಂಟ್ ಇನ್ನೂ ಬರುವುದರೊಳಗೇ ಇದೇ. ಆದ್ದರಿಂದ ಕರಾರುವಾಕ್ಕಾಗಿ ಹೇಳುವುದಕ್ಕಾಗುವುದಿಲ್ಲ.

ಶ್ರೀ ಎಚ್. ಕೆ. ಶಿವರುದ್ರಪ್ಪ.—ಈಗಲಾದರೂ ಪುನರ್ಮಾರ್ಶೆ ಮಾಡಿ ರೆಮಿಷ್ಕ ಕೊಡುವುದಕ್ಕೆ ಸಾಧ್ಯವೇ ?

ಶ್ರೀ ಕಡಿದಾಳ್ ಮಂಜಪ್ಪ.—ಎಲ್ಲೆಲ್ಲಿ ರೆಮಿಷ್ಕ ಕೊಡುವುದರ ಅವಶ್ಯಕತೆಯಿದೆಯೋ ಅಲ್ಲಿ ಕೊಟ್ಟಿದೆ.

ಶ್ರೀ ಎಚ್. ಕೆ. ಶಿವರುದ್ರಪ್ಪ.—ಈ ಪ್ರದೇಶವನ್ನು ಪುನಃ ಪರಿಶೀಲಿಸಿ ರೆಮಿಷ್ಕಕೊಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಆಗಲೇ ಹೇಳಿದ್ದೇನೆ. ಕಾನೂನು ಪ್ರಕಾರ 4 ಆಣೆಗಿಂತ ಕಡಮೆ ಬೆಳೆ ಎಲ್ಲೆಲ್ಲಿ ಆಗಿದೆಯೋ ಅಲ್ಲಿಗೆಲ್ಲಾ ಕೊಡುತ್ತೇವೆ.

ಶ್ರೀ ಎಚ್. ಕೆ. ಶಿವರುದ್ರಪ್ಪ.—ಸಾಮಾನ್ಯವಾಗಿ ನಾಲ್ಕಾಣೆಗಿಂತ ಕಡಮೆ ಬೆಳೆಯೇ ಆಗಿದ್ದರೂ ಅಧಿಕಾರಿಗಳು ನಾಲ್ಕಾಣೆಗಿಂತ ಹೆಚ್ಚಿಗೆಯೇ ಹೇಳಿ ಎರೆಯಿಸುವುದು ತಮಗೆ ಗೊತ್ತಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ. —ನಾನು ಅದನ್ನು ಒಪ್ಪುವುದಿಲ್ಲ. ನೀವು ಈ ತಾಲ್ಲೂಕು ಡಿಸ್ಟೈಸ್ ಪ್ರದೇಶವೆಂದು ಪರಿಗಣಿಸಲ್ಪಟ್ಟಿದೆಯೇ ಎಂದು ಕೇಳಿದ್ದಿರಿ. This aluk is considerd as a Scarcity area.

ಶ್ರೀ ಎಚ್. ಕೆ. ಶಿವರುದ್ರಪ್ಪ.—Scarcity area ಎಂದು ಹೇಳಿದ ಮೇಲೆ ಪರಿಹಾರ ಕೊಡಬೇಕಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ಕೊಟ್ಟಿದೆಯೆಂದು ಆಗಲೇ ಹೇಳಿದೆನಲ್ಲ.

ಶ್ರೀ ಎಚ್. ಕೆ. ಶಿವರುದ್ರಪ್ಪ.—ಈಗ ತಾವು ಕೈಗೊಂಡಿರತಕ್ಕ ಡಿಸ್ಟೈಸ್ ರಿಲೀಫ್ ಕಾಮಗಾರಿಗಳನ್ನು ನಾಡಿಸಿಕೊಟ್ಟು ಅಲ್ಲಿಗೆ ರೆಮಿಷ್ಕ ಪರಿಹಾರವನ್ನು ಇದಗಿಸಿಕೊಡಬೇಕೆಂದು ಹೇಳುವುದಕ್ಕೆ ಸಾಧ್ಯವೇ ?

ಶ್ರೀ ಕಡಿದಾಳ್ ಮಂಜಪ್ಪ.—ಅಲ್ಲಿನ ಸ್ಥಿತಿಗತಿಗಳಿಗನುಸಾರವಾಗಿ ಪರಿಹಾರ ಕೊಡುವುದಕ್ಕೆ ಯೋಚನೆ ಮಾಡುತ್ತೇವೆ.

———

Kadur–Mangalore Railway Line.

Q.–474. Srimathi B. L. SUBBAMMA.–(Chickmagalur-Mudigere).—

Will the Government be pleased to state :—

(*a*) the number of years that have elapsed since the survey work of the Kadur–Mangalore Railway line was conducted ;

(*b*) the steps taken by the Government of Mysore in this behalf ?

A.—Sri Kadidal MANJAPPA.—

(*a*) About 25 years.

(*b*) The Railway Board have been addressed to include this line in the programme of new railway constructions.

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—ಮೊದಲನೆಯ ವರ್ಷದ ಯೋಜನೆಯಲ್ಲಿ ಮೈಸೂರು ಸಂಸ್ಥಾನದಲ್ಲಿ ಎಷ್ಟು ರೈಲ್ವೆ ರೈನುಗಳನ್ನು ಸೇರಿಸಿದ್ದಾರೆ ?

ಶ್ರೀ ಕಡಿದಾಳ್ ಮಂಜಪ್ಪ.—ಆ ವಿವರಗಳು ಈಗ ನನ್ನಲ್ಲಿಲ್ಲ ; ಚಿಕ್ಕಮಗಳೂರು—ಹಾಸನ—ಮಂಗಳೂರು ರೈನನ್ನು ತಗೆದುಕೊಳ್ಳಬೇಕೆಂದು ಬರೆದಿದ್ದೇವೆ, ರೈಲ್ವೆ ಬೋರ್ಡಿನವರಿಗೆ.

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—ರೈಲ್ವೆಬೋರ್ಡಿನಲ್ಲಿ ಮೈಸೂರು ಸಂಸ್ಥಾನದ ಸದಸ್ಯರಿದ್ದಾರೆಯೆ ?

ಶ್ರೀ ಕಡಿದಾಳ್ ಮಂಜಪ್ಪ.—ನೋಟೀಸ್.

ಶ್ರೀಮತಿ ಬಿ. ಎಲ್. ಸುಬ್ಬಮ್ಮ.— ನಮ್ಮ ಸಂಸ್ಥಾನದ ಡಿಸ್ಟ್ರಿಕ್ಟುಗಳ ಪೈಕಿ ಯಾವ ಡಿಸ್ಟ್ರಿಕ್ಟಿನಲ್ಲಿ ರೈಲ್ವೆ ಸೌಕರ್ಯವಿಲ್ಲ ?

ಶ್ರೀ ಕಡಿದಾಳ್ ಮಂಜಪ್ಪ.—ಚಿಕ್ಕಮಗಳೂರು ಡಿಸ್ಟ್ರಿಕ್ಟಿನಲ್ಲಿ.

ಶ್ರೀ ಬಿ. ಎಲ್. ಸುಬ್ಬಮ್ಮ.—ಈ ಡಿಸ್ಟ್ರಿಕ್ಟಿನಲ್ಲಿ ಎಷ್ಟು ರೈಲ್ವೆ ಸೆಸ್ ವಸೂಲು ಮಾಡಿದ್ದಾರೆ ?

ಶ್ರೀ ಕಡಿದಾಳ್ ಮಂಜಪ್ಪ.—ನೋಟೀಸ್.

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—ಈ ಡಿಸ್ಟ್ರಿಕ್ಟಿಗೆ ರೈಲ್ವೆ ಸೌಕರ್ಯ ಅಗತ್ಯವೆಂಬುದು ತಮ್ಮ ಗಮನಕ್ಕೆ ಬಂದಿದೆಯ ?

ಶ್ರೀ ಕಡಿದಾಳ್ ಮಂಜಪ್ಪ.—ಬಂದಿದೆ.

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—ಈ ವಿಷಯದಲ್ಲಿ ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡಿದ್ದೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಕಳೆದ ನವೆಂಬರ್ ತಿಂಗಳಲ್ಲೇ ಬರೆದಿದ್ದೇವೆ.

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—ಹಾಸನ–ಮಂಗಳೂರು ರೈಲ್ ಎಂದು ಹೇಳಿದಿರಿ.....

ಶ್ರೀ ಎಚ್. ಸಿದ್ದವೀರಪ್ಪ.—ನಾನು ಟ್ಯಾಸ್ಕ್‌ಫೋರ್ಸ್ ಕಮಿಟಿ ಮೀಟಿಂಗಿಗೆ ಹೋಗಿದ್ದಾಗ ಚಿಕ್ಕಮಗಳೂರಿಗೆ ರೈಲಿನ ಅವಶ್ಯಕತೆಯುಡೆಯೆಂಬುದನ್ನು ಕೇಂದ್ರ ಸರ್ಕಾರದ ಗಮನಕ್ಕೆ ತಂದಿದ್ದೇನೆ.

ಅಧ್ಯಕ್ಷರು.—ಕೇಂದ್ರ ಸರ್ಕಾರದಿಂದ ದೊರೆತಿರುವ ಉತ್ತರದಲ್ಲಿ ಕೂಡ ಮುಂದಿನ ವರ್ಷದ ಯೋಜನೆಯಲ್ಲಿ ಸೇರಿಸುವುದಾಗಿ ತಿಳಿಸಿದ್ದಾರೆಂದು ವೃತ್ತ ಪತ್ರಿಕಗಳಲ್ಲಿ ಪ್ರಕಟವಾಗಿದೆ.

———